**ಭಾರತೀಯ ಜನತಾ ಪಾರ್ಟಿ**
**(ಕೇಂದ್ರ ಕಚೇರಿ)**
**11, ಅಶೋಕ ರಸ್ತೆ, ನವದೆಹಲಿ–110001**
**Tel. No. :** 23005700; **Fax :** 23005787

**ದಿನಾಂಕ: ಏಪ್ರಿಲ್ 1,2013**

# ಪತ್ರಿಕಾ ಪ್ರಕಟಣೆ

ಮಧ್ಯ ಮಹರಾಷ್ಟ್ರಾದ ಬರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲು ಎರಡು ದಿವಸಗಳ ಪ್ರವಾಸ ಆರಂಭಿಸಲು ಭಾಜಪ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಾಜನಾಥ್ ಸಿಂಗ್ ಅವರು ಇಂದು ಔರಂಗಾಬಾದ್ ತಲುಪಿದರು. ಔರಂಗಾಬಾದ್ ಜಿಲ್ಲೆಯಿಂದ ಪ್ರವಾಸ ಆರಂಭಿಸಿದ ಶ್ರೀ ಸಿಂಗ್ ಅವರು ರೈತರು ಮತ್ತು ಅನ್ಯ ಸ್ಥಳೀಯರನ್ನು ಭೇಟಿ ಮಾಡಿದಾಗ, ಸ್ಥಳೀಯರು ತಮ್ಮ ಪ್ರಾಂತ್ಯದಲ್ಲಿ ಬಿಗಡಾಯಿಸುತ್ತಿರುವ ಬರಗಾಲದ ಪರಿಸ್ಥಿತಿಯ ಕುರಿತು ನೋವು ತೋಡಿಕೊಂಡರು.

ಚರ್ರಾ ಚಾವನಿ ಹಾಗೂ ಪಿಂಪ್ರಿಯಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಸಿಂಗ್ ಅವರು, ಬರ ಪೀಡಿತ ಪ್ರದೇಶದಲ್ಲಿ ಜೀವಿಸುತ್ತಿರುವ ರೈತರು ತೀವ್ರ ಕೃಷಿ ಹಿಂಜರಿತ ಎದುರಿಸುತ್ತಿದ್ದಾರೆ ಎಂದು ತಿಳಿಸಿದರು. ಮಹಾರಾಷ್ಟ್ರದ 11,000ಕ್ಕೂ ಹೆಚ್ಚು ಹಳ್ಳಿಗಳು ಬರಪೀಡಿತವಾಗಿದ್ದು 3500 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಸುಮಾರು ಶೇಕಡ 50ರಷ್ಟು ಬೆಳೆ ನಾಶವಾಗಿದೆ ಎಂದರು.

ಬರ ಪೀಡಿತ ಪ್ರದೇಶಗಳ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು ಎಂದು ಆಗ್ರಹಿಸಿದ ಭಾಜಪ ಅಧ್ಯಕ್ಷರು, ಕೃಷಿ ಉಪಯುಕ್ತ ಸಾಮಗ್ರಿಗಳನ್ನು ರಿಯಾಯಿತಿ ದರದಲ್ಲಿ ನೀಡುವ ಜೊತೆಗೆ, ಉಚಿತ ಬೀಜ, ವಿನಾಯಿತಿ ದರದ ರಸಗೊಬ್ಬರ ಹಾಗೂ ಮುಂದಿನ ಎರಡು ವರ್ಷಗಳವರೆಗೂ ಹನಿ ನೀರಾವರಿ ವ್ಯವಸ್ಥೆ ಅಳವಡಿಸಲು ಶೇಕಡ 100ರ ವಿನಾಯತಿ ನೀಡುವಂತೆ ಸೂಚಿಸಿದರು. ಆ ಭಾಗದ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡುವ ಜೊತೆಗೆ ಜಾನುವಾರುಗಳಿಗೆ ಸಾಕಷ್ಟು ಮೇವು ಒದಗಿಸಬೇಕು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಘೋಷಿಸಿದ ಬರ ಪರಿಹಾರ ಪ್ಯಾಕೇಜ್ ಕುರಿತು ಅತೃಪ್ತಿ ವ್ಯಕ್ತಪಡಿಸಿದ ಅವರು, ರಾಜ್ಯ ಸರ್ಕಾರವೇ 1800 ಕೋಟಿ ರೂಪಾಯಿ ಬರ ಪರಿಹಾರ ಕೋರಿರುವಾಗ ಕೇಂದ್ರ ಸರ್ಕಾರ ಕೇವಲ 1200 ಕೋಟಿ ರೂಪಾಯಿ ಪರಿಹಾರ ಪ್ಯಾಕೇಜ್ ಪ್ರಕಟಿಸಿದ್ದು ಸರಿಯಲ್ಲವೆಂದು ಶ್ರೀ ಸಿಂಗ್ ನುಡಿದರು. ಬರ ಪರಿಹಾರಕ್ಕೆ ಹೆಚ್ಚಿನ ಮೊತ್ತವನ್ನು ಸರ್ಕಾರ ಮಂಜೂರು ಮಾಡುವ ಜೊತೆಗೆ ಬರ ಪರಿಹಾರ ಪ್ಯಾಕೇಜ್ ಅನುಷ್ಠಾನದ ಕುರಿತು ನಿಗಾವಹಿಸಲು, ಕೇಂದ್ರ ಉಸ್ತುವಾರಿ ತಂಡವನ್ನು ನಿಯೋಜಿಸಬೇಕು ಎಂದು ಅವರು ನುಡಿದರು.

ಆಡಳಿತ ವಹಿಸಿಕೊಂಡಿರುವ ಪ್ರಸ್ತುತ ರಾಜ್ಯ ಸರ್ಕಾರ ನೀರಾವರಿ ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ಎಸಗಿದೆ ಎಂದು ಆರೋಪಿಸಿದ ಶ್ರೀ ಸಿಂಗ್ ಅವರು, ನೀರಾವರಿಯ ಹಲವು ಮಹತ್ವಾಕಾಂಕ್ಷೆಯ ಯೋಜನೆಗಳ ಅನುಷ್ಠಾನದಲ್ಲಿ 70,000 ಕೋಟಿ ರೂಪಾಯಿಗೂ ಹೆಚ್ಚಿನ ಹಗರಣ ನಡೆದಿದ್ದು, ಕಳೆದ ಹತ್ತು ವರ್ಷಗಳಲ್ಲಿ ಕೇವಲ ಶೇಕಡ 0.1 ರಷ್ಟು ಹೆಚ್ಚುವರಿ ನೀರಾವರಿ ಭೂಮಿಯನ್ನು ಒಟ್ಟು ವ್ಯವಸಾಯ ಪ್ರದೇಶಕ್ಕೆ ಸೇರಿಸಲಾಗಿದೆ ಎಂದು ಪರಿತಪಿಸಿದರು.

ಬರ ಪೀಡಿತ ಪ್ರದೇಶದಲ್ಲಿ ನೀರಿನ ಮಟ್ಟ ಕ್ಷೀಣಿಸುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿದ ಅವರು, ಮಹಾರಾಷ್ಟ್ರ ಜಲ ಸಂಪನ್ಮೂಲಗಳ ಪ್ರತಿಬಂಧಕ ಪ್ರಾಧಿಕಾರ ಕಾಯಿದೆ (ಎಂಡಬ್ಲ್ಯುಆರ್ಆರ್ಎ) ಯನ್ನು ಆ ರಾಜ್ಯ ಜಾರಿಗೆ ತಂದಿದ್ದರೂ ಜನಸಾಮಾನ್ಯರು, ರೈತರು ಮತ್ತು ಗ್ರಾಮೀಣ ಭಾಗದ ಬಡವರಿಂದ ಅತ್ಯಮೂಲ್ಯ ನೀರನ್ನು ಪೋಷಿಸಿ ಪರ್ಯಾಯ ಬಳಕೆಯನ್ನು ತಡೆಯಲು ಸಾಧ್ಯವಾಗಿಲ್ಲ. ನೀರಿನ ದುರ್ಬಳಕೆ ಹಾಗೂ ಪರ್ಯಾಯ ಬಳಕೆಯನ್ನು ತಪ್ಪಿಸಲು ಎಂಡಬ್ಲ್ಯುಆರ್ಆರ್ಎ ಕಾಯಿದೆಯನ್ನು ತಕ್ಷಣ ತಿದ್ದುಪಡಿ ಮಾಡುವ ಅಗತ್ಯವಿದೆ.

ಬರ ಪಿಡಿತ ಬಡ ಗ್ರಾಮಸ್ಥರು ಮತ್ತು ರೈತರು ಅನಿವಾರ್ಯವಾಗಿ ಗುಳೆ ಹೋಗುವ ಮತ್ತು ದೊಡ್ಡ ನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿ ಉದ್ಭವಿಸಿದೆ. ಈ ಸಮಸ್ಯೆ ನೀಗಿಸಲು ಸರ್ಕಾರ ಎಂಎನ್ಆರ್ಇಜಿಎ ಆಯಾಮ ವಿಸ್ತರಿಸಿ ಅದನ್ನು ಕೃಷಿ ವಲಯದೊಂದಿಗೆ ಬೆಸೆಯಬೇಕು.

ಮಹಾರಾಷ್ಟ್ರದಲ್ಲಿ ಉದ್ಭವಿಸಿರುವ ಭೀಕರ ಬರಗಾಲದ ಪರಿಸ್ಥಿತಿಯ ಚರ್ಚೆ ಕೈಗೆತ್ತಿಕೊಳ್ಳುವಂತೆ ಸಂಸದ್‌ನ ಎರಡೂ ಸದನಗಳಲ್ಲೂ ಒತ್ತಾಯಿಸಲಾಗುವುದು ಎಂದು ಶ್ರೀ ಸಿಂಗ್ ರೈತರಿಗೆ ಆಶ್ವಾಸನೆ ನೀಡಿದರು.

(ಓ.ಪಿ.ಕ್ವೊಲಿ)

ಮುಖ್ಯಕಚೇರಿ ಪ್ರಭಾರಿ